## ಪ್ರಬುದ್ಧ ಕಥೆ

‘ಯಾರು ಹೊಣೆ?’ (ಜೂ. 12, ಡಾ. ಬಿ.ಟಿ. ಕವಿತ) ಕಥೆ ಹೃದಯಸ್ಪರ್ಶಿಯಾಗಿತ್ತು. ನೈಜ ಘಟನೆ ಆಧಾರಿತವಾಗಿದ್ದುದರಿಂದಲೋ ಏನೋ, ಮಾನವೀಯತೆಯ ಸ್ಪರ್ಶವಿತ್ತು. ಪ್ರೀತಿ, ಪ್ರೇಮ ಎಂದು ಅನಾಹುತ ಮಾಡಿಕೊಳ್ಳುವುದಲ್ಲದೆ, ಪೋಕ್ಸೊದಂಥ ಕಾನೂನಿನ ಹಿಡಿತಕ್ಕೆ ಸಿಕ್ಕಿ, ಜೈಲಲ್ಲಿ ಕೊಳೆಯುವ ಪರಿಸ್ಥಿತಿ ತಂದುಕೊಳ್ಳುವವರಿಗೆ ಎಚ್ಚರಿಕೆ ಹೇಳುವಂತಿದೆ. ಸಂಕ್ಷಿಪ್ತತೆ, ಸರಳ ನಿರೂಪಣೆಯಿಂದ ಪರಿಣಾಮಕಾರಿಯಾಗಿದೆ. ಹಾಗೇ, ಅರ್ಥಪೂರ್ಣ ಶೀರ್ಷಿಕೆಯಿಂದ ಎಲ್ಲರೂ ಯೋಚನೆ ಮಾಡುವಂತಿದೆ.



—ಪಿ. ಯಶೋದಾ ರಾಜಶೇಖರಪ್ಪ, ಚಿತ್ರದುರ್ಗ




## ಅರಿವು ತಂದ ಬರಹ

‘ಮತ್ತೆ ಮಳೆ ಹುಯ್ಯುತಿದೆ’ (ಜೂ. 12, ಮಹತಿ) ಮುಖಪುಟ ಲೇಖನ ಆಧುನಿಕತೆಯ ಚಟಕ್ಕೆ ಸಿಕ್ಕಿರುವ ಪ್ರತಿಯೊಬ್ಬರ ಕಣ್ತೆರೆಸಿ, ವಾಸ್ತವಿಕತೆಯ ಕಹಿಸತ್ಯದ ಅರಿವುಂಟುಮಾಡುವ ಅದ್ಭುತ ಪ್ರಯತ್ನವಾಗಿದೆ.

ಜೀವನದಲ್ಲಿ ಸರಳತೆಯ ಮಹತ್ವ, ಕೊಳ್ಳುಬಾಕತನದ ಕೃತ್ರಿಮತೆ, ಹೊಣೆಗೇಡಿತನದ ಪರಾಕಾಷ್ಠೆಯ ಪರಿಣಾಮ, ಹೀಗೆ ಇಡೀ ಲೇಖನ ತುಂಬ ಪ್ರಬುದ್ಧವಾಗಿದೆ. ಮಳೆನೀರಿನ ಕೊಯಿಲಿನ ಅನಿವಾರ್ಯತೆಯನ್ನು ಇನ್ನಾದರೂ ಮನಗಂಡು ಆ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಲೇಬೇಕಾಗಿದೆ.

—ಕೆ.ಆರ್. ಶಕುಂತಲಮ್ಮ

## ಎಚ್ಚೆತ್ತುಕೊಳ್ಳಬೇಕಿದೆ

ಮಳೆ ಹಾಗೂ ಅದರ ಒಂದು ಅದ್ಭುತ ಬರಹ. ಪ್ರತಿಯೊಬ್ಬ ವ್ಯಕ್ತಿ ಅರಿತುಕೊಳ್ಳಬೇಕಾದ ಲೇಖನ. ಆಧುನಿಕತೆಗೆ ಮಾರುಹೋಗಿ ನಮ್ಮ ಪರಿಸರವನ್ನು ನಾವೇ ಹಾಳು ಮಾಡುತ್ತಿದ್ದೇವೆ. ಮಳೆಗಾಲದಲ್ಲಿ ಯಾವ ಬಗೆಯಲ್ಲಿ ನೀರು ಸಂಗ್ರಹಿಸಿಟ್ಟುಕೊಳ್ಳಬೇಕು, ಹೇಗೆ ಬಳಸಬೇಕು ಎಂಬುದರ ಕುರಿತು ಚೆನ್ನಾಗಿ ವಿವರಿಸಿದ್ದಾರೆ. ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಓದಿ ಮರೆಯಬಾರದು.

—ಹನುಮಂತಪ್ಪ ಕೊಳಗಿ ಸಾಗರ

## ಸುಂದರ ರಕ್ಷಾಪುಟ

ಮಳೆ ಕುರಿತ ರಕ್ಷಾಪುಟ ಮನಸ್ಸನ್ನು ಸೂರೆಗೊಂಡಿತು. ಮುಗ್ಧ ಬಾಲೆಯ ಸುಂದರ ನಗು ಮನಸ್ಸನ್ನು ಉಲ್ಲಾಸಗೊಳಿಸಿತು.

—ವಸುಧಾ ಜೈಶಂಕರ್, ಬೆಂಗಳೂರು

## ಅದ್ಭುತ ಪ್ರಯತ್ನ

‘ನಾಡಮಾವಿಗೆ ನೂರಾರು ನೆಂಟರು’ (ಜೂ. 12, ಸಂಧ್ಯಾ ಹೆಗಡೆ) ಬರಹ ಚೆನ್ನಾಗಿದೆ. ದೇಸಿ ಮಾವಿನಹಣ್ಣಿನ ತಳಿಯನ್ನು ಉಳಿಸುವ ನಾಮಾಮಿ ಬಳಗದ ಪ್ರಯತ್ನ ಅದ್ಭುತ. ಕಸಿಸಸಿಗಳು ಸಿಗುವ ಬಗ್ಗೆ, ಬಳಗದ ಪ್ರಯತ್ನದಲ್ಲಿ ಭಾಗವಹಿಸುವ ಆಸಕ್ತರಿಗೆ ಮಾಹಿತಿ ಅಗತ್ಯವಿತ್ತು. ದಾಸವಾಳ, ಗುಲಾಬಿ ಇವುಗಳ ಮೂಲತಳಿಗಳು ಕಾಣೆಯಾಗುತ್ತಿದೆ ಎಂಬುದು ವಿಷಾದದ ಸಂಗತಿ.



—ಸುಜಾತಾ ಎಚ್.ಪಿ., ಶಿವಮೊಗ್ಗ

## ಬಾಯಲ್ಲಿ ನೀರೂರಿತು

ಸಾಗರದಲ್ಲಿದ್ದಾಗ ತಿಂದ ಕಾಟುಮಾವಿನ ಹಣ್ಣು, ಅದರ ಸಾರು, ಗೊಜ್ಜುಗಳ ರುಚಿ ನೆನಪಾಗಿ ಬಾಯಲ್ಲಿ ನೀರೂರಿತು.

—ನಳಿನಿ ಬಿ.ಎನ್.

## ಸ್ಫೂರ್ತಿ ತುಂಬಿದ ಕಥನ

‘ಕೃಷಿಸಖ್ಯ ನ್ಯಾಯದ ಪಥ’ (ಜೂ. 12, ಸುಬ್ರಹ್ಮಣ್ಯ ಎಚ್.ಎಂ.) ಲೇಖನ ಸ್ಫೂರ್ತಿದಾಯಕವಾಗಿದೆ. ಎಚ್.ಎನ್. ಮೋಹನ್‌ರವರು, ನ್ಯಾಯಾಧೀಶರಾಗಿದ್ದರೂ, ಗರ್ವ ಇಲ್ಲದೇ ರೈತಾಪಿ ಕೆಲಸ ಮಾಡುವ ಮನೋಭಾವ ಅಭಿನಂದನೀಯ. ‘ಜನ್ಮ ನೀಡಿದ ತಾಯಿ ಹಾಗೂ ಜನ್ಮ ಪಡೆದ ಭೂಮಿ, ಇವೆರಡೂ ಸ್ವರ್ಗಕ್ಕಿಂತ ಶ್ರೇಷ್ಠ’ ಎಂಬುದನ್ನು ಇವರ ಕಾರ್ಯಗಳಿಂದ ಕಲಿಯಬೇಕು.

—ಪಿ.ಎಸ್. ಭಂಡಾರೆ

## ಸರ್ವವ್ಯಾಪಿ ಖರ್ಜೂರ

‘ಖರ್ಜೂರ; ಮರುಭೂಮಿಯ ಅಮೃತಫಲ’ (ಜೂ. 12, ರಹಮತ್ ತರೀಕೆರೆ) ಲೇಖನ ಬಹಳ ಇಷ್ಟವಾಯಿತು. ಭಾಷಾಶೈಲಿ ಮುದ ನೀಡಿತು. ನಮ್ಮ ಬದುಕಿನ ಸಂದರ್ಭದಲ್ಲಿ ಕಾಣುತ್ತಿರುವ ಸಂಗತಿಗಳೊಂದಿಗೆ ಅಲ್ಲಿನ ಸಂಗತಿಗಳನ್ನು ತಳಕು ಹಾಕಿ ಹೇಳಿರುವ ಕ್ರಮದಿಂದಾಗಿ ಅಲ್ಲಿನ ವಿಷಯಗಳು ನಮಗೆ ಆತ್ಮೀಯವಾಗಿಬಿಡುತ್ತವೆ. ಉದಾಹರಣೆಗೆ, ನಮ್ಮೂರ ಸಂತೆಗಳಲ್ಲಿ ಬೆಲ್ಲವನ್ನು ಚಾಪೆಯಲ್ಲಿ ಸುತ್ತಿ ತಂದು ಮಾರುವಂತೆ ಅಲ್ಲಿ ಖರ್ಜೂರವನ್ನು ಮಾರುತ್ತಾರೆ ಎಂದಾಗ ನಮಗೆ ಒಂದು ಸ್ಪಷ್ಟ ಚಿತ್ರ ಮೂಡುತ್ತದೆ. ಹಾಗೆಯೇ ತಿಪಟೂರು ಭಾಗದ ತೆಂಗಿನ ತೋಟಕ್ಕೆ ಖರ್ಜೂರದ ತೋಟವನ್ನು ಹೋಲಿಸಿರುವುದು ಖರ್ಜೂರದ ತೋಟವನ್ನು ಕಣ್ಮುಂದೆ ತರುತ್ತದೆ. ಲೇಖನ ಲವಲವಿಕೆಯಿಂದ ಕೂಡಿದ್ದು ಒಂದೇ ಬೈಟಕ್ಕಿನಲ್ಲಿ ಓದಿಸಿಕೊಂಡಿತು.

—ಪಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು



## ಅನುಭವವೇ ಪಾಠವಾಗಲಿ

‘ಭಾರತದ ಮಗಳು’ (ಜೂ. 12, ಪ್ರವೀಣ ಕುಲಕರ್ಣಿ) ‘ಸೆಲೆಬ್ರಿಟಿ’ಯಲ್ಲಿ ಉಸ್ಮಾ ಅವರ ಜೀವನಚರಿತ್ರೆ ಓದಿ ಆಘಾತವಾಯಿತು. ಸುಧಾರಿಸಿಕೊಳ್ಳಲು ಸ್ವಲ್ಪ ಸಮಯ ಬೇಕಾಯಿತು. ಇಂತಹ ಟ್ರ್ಯಾಪ್‌ಗೆ ಒಳಗಾಗಿ ನರಕಯಾತನೆ ಅನುಭವಿಸುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ ದೊಡ್ಡದಿದೆ ಎಂಬುದು ಮನಕಲಕುವ ಸಂಗತಿ. ಅವರೆಲ್ಲರಿಗೂ ಉಸ್ಮಾರಂತೆ ಹೊರಬರುವ ಅದೃಷ್ಟ ಬರಲಿ. ಹೆಣ್ಣುಮಕ್ಕಳಿಗೆ ಇವರ ಅನುಭವ ಪಾಠವಾಗಲಿ.

—ಧನಲಕ್ಷ್ಮಿ ಪುರುಷೋತ್ತಮರಾವ್, ಕೋಲಾರ

## ಮನೆ ಮನೆ ಕಥೆಯೇ...

‘ನೋಡಿದೋರು ಏನಂತಾರೆ?’ (ಜೂ. 05, ಅನಿತಾ ನಾಡಿಗ್) ಪ್ರತಿದಿನ, ಕ್ಷಣ, ಗಳಿಗೆಗಳಲ್ಲಿ ನಡೆಯುವ ಮನೆ ಮನೆ ಕಥೆಯೇ. ನಾವು ನಡೆಸುವ ಜೀವನ ರೀತಿ ಸಮಾಜಕ್ಕೆ ತೊಂದರೆಯಾಗದಂತಿದ್ದಾಗ ‘ನೋಡಿದೋರು ಏನಂತಾರೆ?’ ಎಂಬ ಭಾವ ಖಂಡಿತ ಇರದು.

—ಸುಮನಾ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in